**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಫಜಲಪೂರ.</u>**

**<u>ಸಿ.ಸಿ.ನಂ.310/2019</u>**

ಸರಕಾರದ ಪರವಾಗಿಃ ಅಬಕಾರಿ ನಿರೀಕ್ಷಕರು ಉಪ-ವಿಭಾಗ, ಕಲಬುರಗಿ.

**-:ವಿರುದ್ದ:-**

**ಆರೋಪಿ/ತರುಃ** ಶಂಕರ ತಂದೆ ರಾಮು ರಾಠೋಡ,
52 ವರ್ಷ, ಉಃಸಿಮೆಂಟ ಹಾಲೋಬ್ರಿಕ್ಸ್
ತಯಾರಿಸುವ ಘಟಕದ ಮಾಲೀಕ,
ವಾಸಃ ಗೊಬ್ಬುರವಾಡಿ ತಾಂಡಾ,
ತಾಃ ಅಫಜಲಪೂರ, ಜಿಃ ಕಲಬುರಗಿ.

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತನ ಹೇಳಿಕೆಗಳು</u>**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ

ಪ್ರಃ 2 ಪ್ರಾಸಾ-01 ಭೀಮಸೇನರಾವ ಶಂದೆ ಶಂಕರರಾವ್ ನಿವೃತ್ತ ನೌಕರ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 20.04.2019 ರಂದು ಲೋಕಸಭಾ ಚುನಾವಣೆ ನಿಮಿತ್ಯ ನೀತಿ ಸಂಹಿತೆ ಜಾರಿ ಇದ್ದ ಪ್ರಯುಕ್ತ ಚಾಸಾ-3, ಸಿಬ್ಬಂದಿ ಮತ್ತು ಪಂಚರೊಂದಿಗೆ ಸರಕಾರಿ ವಾಹನ ನಂ.ಕೆಎ-32/878 ನೇದ್ದರಲ್ಲಿ ಕುಳಿತುಕೊಂಡು ರಸ್ತೆ ಗಸ್ತು ಮಾಡುತ್ತಾ ಗೊಬ್ಬುರ, ಬಂದರವಾಡ, ಚೌಡಾಪೂರ ಮತ್ತು ಅಫಜಲಪೂರದಲ್ಲಿ ಗಸ್ತು ಕರ್ತವ್ಯ ಮತ್ತು ವಾಹನ ತಪಾಸಣೆ ಮಾಡುತ್ತಾ ಚಾಸಾ-3 ರವರಿಗೆ ಖಚಿತ ಬಾತ್ಮಿ ಬಂದ ಪ್ರಯುಕ್ತ ಗೊಬ್ಬುರವಾಡಿ ತಾಂಡಾದಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂದ ಕಾರಣ ಅಫಜಲಪೂರದಿಂದ ಗೊಬ್ಬುರವಾಡಿ ತಾಂಡಾದ ಹತ್ತಿರ ವಡ್ಡಳ್ಳಿ ಕ್ರಾಸ ಹತ್ತಿರ ಸಿಮೆಂಟ ಹಾಲೋ ಬಾಕ್ಸ ತಯಾರಿಕೆ ಘಟಕದ ಹತ್ತಿರ ಹೋದಾಗ ಅಲ್ಲಿ ಒಂದು ಕಾರು ನಿಂತಿತ್ತು, ಅದರ ಹತ್ತಿರ ಹೋದಾಗ ಸದರಿ ಆರೋಪಿತನು ಮರಳಿನ ಮೇಲೆ ಮಲಗಿದ್ದ ತಮ್ಮನ್ನು ನೋಡಿ ಮಲಗಿದ್ದ ಹಾಸಿಗೆಯನ್ನು ಬಿಟ್ಟು ಓಡಿ ಹೋಗಿದ್ದ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 3 ಪ್ರಾಸಾ-01 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ಆರೋಪಿತನನ್ನು ಹಿಡಿಯಲು ಪ್ರಯತ್ನಿಸಿದ್ದು, ಆದರೆ ಸಿಗಲಿಲ್ಲ. ಅಲ್ಲೆ ಬಿಟ್ಟಿದ ಆತನ ಅಂಗಿಯಲ್ಲಿನ ಜೇಬನ್ನು ನೋಡಲಾಗಿ ಅದರಲ್ಲಿ ಚಾಲನ ಪ್ರಮಾಣ ಪತ್ರ, ಆಧಾರ ಕಾರ್ಡ ಮತ್ತು ಸದರಿ ಕಾರಿನ ಕೀ ಇರುವುದು ಕಂಡುಬಂದಿದ್ದು ಚಾಸಾ-3 ರವರು ಓಡಿ ಹೋದ ಆರೋಪಿತನ ಹೆಸರು ಶಂಕರ ತಂದೆ ರಾಮು ರಾಠೋಡ ಎಂಬುವುದು ಗೊತ್ತಾಗಿದ್ದು, ನಂತರ ಚಾಸಾ-3 ರವರು ವಾಹನ ಶೋಧನಾ ಪತ್ರವನ್ನು ತಯ್ಯಾರಿಸಿ ವಾಹನವನ್ನು ಶೋಧನೆ ಮಾಡಿದಾಗ ಎರಡು ರಟ್ಟಿನ ಪೆಟ್ಟಿಗೆಗಳು ಕಂಡು

ಬಂದವು, ಪ್ರತಿಯೋದರಲ್ಲಿ 96 ರಂತೆ ಒಟ್ಟು 192 90 ಎಂ.ಎಲನ ಟೇಟ್ರಾ ಪ್ಯಾಕಗಳು ಕಂಡು ಬಂದಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 4 ಪ್ರಾಸಾ-01 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಚಾಸಾ-3 ರವರು ಒಟ್ಟು 26, 90 ಎಂಎಲನ ಟೇಟ್ರಾ ಪ್ಯಾಕಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದಿರುತ್ತಾರೆಂದು ಹಾಗೂ ಅವುಗಳಿಗೆ ಬಿಳಿ ಬಟ್ಟೆಯನ್ನು ಸುತ್ತಿ, ಧಾರದಿಂದ ಕಟ್ಟಿ ಅರಗಿನಿಂದ ಸೀಲ್ ಮಾಡಿ, ನಂತರ ಚಾಸಾ-3 ರವರು ಪಂಚರ ಸಹಿಯನ್ನು ಪಡೆದು ಚೀಟಿಯನ್ನು ಅವುಗಳಿಗೆ ಅಂಟಿಸಿ, ನಂತರ ಬೆಳಗ್ಗೆ 03-00 ರಿಂದ 04-00 ಗಂಟೆವರೆಗೆ ಪಂಚನಾಮೆಯನ್ನು ಜರುಗಿಸಿ ಪಂಚರ ಸಹಿ ಪಡೆದುಕೊಂಡು ನಂತರ ಮುದ್ದೇಮಾಲು ಮತ್ತು ಕಾರನ್ನು ತೆಗೆದುಕೊಂಡು ಕಚೇರಿಗೆ ಬಂದು ಮುಂದಿನ ಕ್ರಮ ಜರುಗಿಸಿರುತ್ತಾರೆಂದು ಹಾಗೂ ಇದರಂತೆ ತಾನು ಚಾಸಾ-3 ರವರ ಮುಂದೆ ಹೇಳಿಕೆ ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 5 ಪ್ರಾಸಾ-01 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ಪ್ರಕರಣದಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಮುದ್ದೇಮಾಲುಗಳನ್ನು ರಾಯಚೂರಿನ ರಾಸಾಯನಿಕ ಪ್ರಯೋಗಾಲಕ್ಕೆ ದಿನಾಂಕಃ 13.05.2019 ರಂದು ತೆಗೆದುಕೊಂಡು ಹೋಗಿದ್ದು, ಸದರಿ ದಿನದಂದು ಪರೀಕ್ಷೆ ವರದಿಯನ್ನು ತೆಗೆದುಕೊಂಡು ಬಂದು ದಿನಾಂಕಃ 13.05.2019 ರಂದು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡ ಹೋದ ಸೀಲ್ ಮಾಡಿದ ಎರಡು ಬಿಳಿ ಬಟ್ಟೆಯ ಚೀಲದಲ್ಲಿರುವ 13, 13 ರಂತೆ ಬಾಟಲಗಳು ಇದ್ದು, ಸದರಿ ಬಿಳಿ ಬಟ್ಟೆಯ ಚೀಲವನ್ನು ತಾನು ಈಗ ನೋಡುತ್ತಿದ್ದು ಅದನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುದ್ದೇ ಮಾಲು-1 ಮತ್ತು 2 ಎಂದು ಗುರುತಿಸಲಾಯಿತು ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 6 ಪ್ರಾಸಾ-02 ವಿಜಯಕುಮಾರ ತಂದೆ ಶಿವರಾಜ ಅಬಕಾರಿ ಉಪ-ಅಧೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 20.04.2019 ರಂದು ರಾತ್ರಿ 10-00 ಗಂಟೆಗೆ ತಿಮ್ಮಾಪೂರ ಸರದಾರ ವಲ್ಲಬಾಯಿ ಪಟೇಲ ಸರ್ಕಲ ಹತ್ತಿರ ನಿಂತಿದ್ದ ಇಬ್ಬರು ವ್ಯಕ್ತಿಗಳನ್ನು ಅಬಕಾರಿ ರಕ್ಷಕರ ಮುಖಾಂತರ ಠಾಣೆಗೆ ಬರಮಾಡಿಕೊಂಡು, 2019 ರ ಸಾರ್ವತ್ರಿಕ ಚುನಾವಣೆ ಇದ್ದ ಪ್ರಯುಕ್ತ ಅಕ್ರಮ ಚಟುವಟಿಕೆ ತಡೆಗಟ್ಟುವ ನಿಟ್ಟಿನಲ್ಲಿ ಕಲಬುರಗಿ-ಅಫಜಲಪೂರ ರಸ್ತೆ ಮತ್ತು ಒಳ ರಸ್ತೆಗಳಲ್ಲಿ ರಸ್ತೆ ಗಸ್ತು ಮಾಡಬೇಕಾಗಿದ್ದು, ಅದಕಾರಣ ಯಾವುದಾದರೂ ಅಕ್ರಮ ಚಟುವಟಿಕೆಗಳು ಕಂಡು ಬಂದಲ್ಲಿ ಪಂಚರಾಗಿ ಪಂಚನಾಮೆ ಬರೆಯಿಸಿಕೊಡಲು ಕೇಳಿಕೊಂಡಿದ್ದು, ಅವರುಗಳು ನಮ್ಮ ಕೋರಿಕೆಗೆ ಒಪ್ಪಿದ್ದು, ನಂತರ ಇಲಾಖಾ ವಾಹನ ನಂಬರ ಕೆಎ-32/ಜಿ-878 ನೇದ್ದರಲ್ಲಿ ಬಸವರಾಜ ಮತ್ತು ಚಾಸಾ-6 ಮತ್ತು ಚಾಸಾ-1 ಮತ್ತು 2 ರವರು ಸೇರಿಕೊಂಡು ರಸ್ತೆ ಗಸ್ತು ಮಾಡುತ್ತಾ ಬಿದನೂರ, ಹೂವಿನನಳ್ಳಿ, ಬಂದರವಾಡ ಒಳ ರಸ್ತೆಗಳಲ್ಲಿ ರಸ್ತೆ ಗಸ್ತು ಮಾಡುತ್ತಾ ಗೊಬ್ಬುರ ಗ್ರಾಮಕ್ಕೆ ಬಂದಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 7 ಪ್ರಾಸಾ-02 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಗೊಬ್ಬುರ ಗ್ರಾಮದಲ್ಲಿ ಅಫಜಲಪೂರಕ್ಕೆ ಬರುವ ರಸ್ತೆಯಲ್ಲಿ ರಸ್ತೆಗಾವಲು ಮಾಡುತ್ತಾ ನಿಂತಿದ್ದಾಗ ಒಂದು ಖಚಿತ ಬಾತ್ಮಿ ಬಂದ ಮೇರೆಗೆ ಗೊಬ್ಬುರ ವಾಡಿ ತಾಂಡಾದ ವಡ್ಡಳ್ಳಿ ಕ್ರಾಸ ಹತ್ತಿರ ಸದರಿ ಆರೋಪಿ ಶಂಕರ ತಂದೆ ರಾಮು ರಾಠೋಡ ಇವರಿಗೆ ಸೇರಿದ ಸಿಮೆಂಟ್ ಹಲ್ಲೋಬ್ರೇಕ್ಸ ತಯ್ಯಾರಿಸುವ ಘಟಕದಲ್ಲಿ ಇಂಡಿಕಾ ವಿಸ್ತಾ ಕಾರಿನಲ್ಲಿ ಅಕ್ರಮವಾಗಿ ಮಧ್ಯ ಸಂಗ್ರಹಿಸಿ ಇಟ್ಟಿದ ಕುರಿತು ಬಾತ್ಮಿ ಬಂದಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 8 ಪ್ರಾಸಾ-02 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆ ನಂತರ ತಾವು ತಮ್ಮ ಚಾಲಕನಿಗೆ ಸದರಿ ವಡ್ಡಳ್ಳಿ ಕ್ರಾಸ ಹತ್ತಿರ ಹೋಗಲು ತಿಳಿಸಿದ್ದು ಸದರಿ ಆರೋಪಿ ಶಂಕರ ತಂದೆ ರಾಮು ರಾಠೋಡ ಇವರಿಗೆ ಸೇರಿದ ಸಿಮೆಂಟ್ ಹಲೋಬ್ರೇಕ್ಸ ಘಟದಲ್ಲಿ ತಮ್ಮ ವಾಹನವನ್ನು ನಿಲ್ಲಿಸಿದ ತಕ್ಷಣ ಮರಳಿನ ಗುಂಪೆಯ ಮೇಲೆ ಸದರಿ ಆರೋಪಿ ತಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ ತಕ್ಷಣ ತಾನು ತಮ್ಮ ಸಿಬ್ಬಂದಿ ಆತನನ್ನು ಹಿಡಿಯಲು ಸೂಚಿಸಿದ್ದು, ಆಗ ಸಮಯ ಬೆಳಗಿನ ಜಾವ 03-00 ಗಂಟೆ ಆಗಿತ್ತು, ಓಡಿ ಹೋದ ಆರೋಪಿತನು ಕತ್ತಲಲ್ಲಿ ತಪ್ಪಿಸಿಕೊಂಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 9 ಪ್ರಾಸಾ-02 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತಾವು ಸದರಿ ಮೇಲೆ ತಿಳಿಸಿದ ಸದರಿ ವಾಹನ ಮತ್ತು ಟೀನ್ ಶೆಡ ಶೋಧನೆ ಮಾಡಲು ನ್ಯಾಯಾಲಯದಿಂದ ಶೋಧನಾ ಪರವಾನಿಗೆ ಪಡೆಯಲು ಕಾಲವಕಾಶ ಇಲ್ಲದ ಕಾರಣ ಸ್ಥಳದಲ್ಲಿಯೇ ಶೋಧನಾ ಸಮ್ಮುಚಿತ ಆಧಾರ ಪತ್ರವನ್ನು ತಯ್ಯಾರಿಸಿ ಪಂಚರ ಸಹಿಗಳನ್ನು ಪಡೆದು, ಆ ನಂತರ ಸದರಿ ಸ್ಥಳವನ್ನು ಶೋಧಿಸಲು ಪ್ರಾರಂಭಿಸಿದ್ದು ಮತ್ತು ತಮ್ಮ ನೋಡಿ ಓಡಿ ಹೋದ ವ್ಯಕ್ತಿಯ ಮಲಗಿದ್ದ ಹಾಸಿಗೆಯನ್ನು ಶೋಧಿಸಿದಾಗ ಆತನು ಸ್ಥಳದಲ್ಲಿ ಬಿಟ್ಟು ಹೋಗಿದ್ದ ಆತನ ಅಂಗಿಯ ಜೇಬಿನಲ್ಲಿ ಆಧಾರ ಕಾರ್ಡ ಮತ್ತು ಕಾರಿನ ಕೀಯನ್ನು ಬಿಟ್ಟು ಹೋಗಿದ್ದು, ಸದರಿಯವುಗಳನ್ನು ತಮ್ಮ ತಾಬಾಕ್ಕೆ ತೆಗೆದುಕೊಂಡು ಅವುಗಳನ್ನು ಪರಿಶೀಲಿಸಿ ನೋಡಿದಾಗ ಸದರಿ ಆಧಾರ ಕಾರ್ಡನಲ್ಲಿ ಶಂಕರ ರಾಮು ರಾಠೋಡ ಇದ್ದು, ಬಾತ್ಮಿಯಲ್ಲಿ ತಿಳಿಸಿದ ವ್ಯಕ್ತಿಯು ಓಡಿ ಹೋದ ವ್ಯಕ್ತಿ ಎಂದು ಖಚಿತಪಡಿಸಿಕೊಂಡು, ನಂತರ ಮೇಲೆ ತಿಳಿಸಿದ ಕಾರಿನ ನಂಬರ ಕೆಎ-28/ಎಂ-7878 ಅಂತಾ ಇದ್ದು, ಆ ನಂತರ ಕಾರಿನ ಡಿಕ್ಕಿಯನ್ನು ತೆಗೆದು ಪರೀಶಿಲಿಸಿದಾಗ ಯು.ಎಸ್ ವಿಸ್ಕಿಯ 90 ಎಂಎಲನ ಎರಡು ರಟ್ಟಿನ ಪೆಟ್ಟಿಗಗಳು ಪತ್ತೆಯಾದವು, ಪ್ರತಿಯೋಂದು ರಟ್ಟಿನ ಪೆಟ್ಟಿಗೆಯಲ್ಲಿ 96 ರಂತೆ ಒಟ್ಟು 192 ಯುಎಸ್ ವಿಸ್ಕಿಯ 90 ಎಂಎಲನ ಪೆಟ್ ಬಾಟಲಗಳು ಇರುವುದು ಕಂಡುಬಂದಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 10 ಪ್ರಾಸಾ-02 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತದನಂತರ ಟೀನ್ ಶೆಡನ್ನು ಪರಿಶೀಲಿಸಿದಾಗ ಅಲ್ಲಿ ಯಾವುದೇ ಮಧ್ಯ ಇರುವುದು ಕಂಡು ಬಂದಿರುವುದಿಲ್ಲ. ಈ ರೀತಿ ಅಕ್ರಮವಾಗಿ ಸಂಗ್ರಹಿಸಿದ್ದು ಕಂಡು ಬಂದಿದ್ದು, ತದನಂತರ ಪಂಚರ ಸಮಕ್ಷಮ ಸದರಿಯವುಗಳನ್ನು ಜಪ್ತಿಪಡಿಸಿಕೊಂಡು, ಪ್ರತಿ ರಟ್ಟಿನ ಪೆಟ್ಟಿಗೆಯಿಂದ 13 ರಂತೆ ಪೆಟ್

ಬಾಟಲಗಳನ್ನು ಒಟ್ಟು 26 ಬಾಟಲಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಳನ್ನು ತೆಗೆದು ಅವುಗಳಿಗೆ ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಅರಗಿನಿಂದ ಸೀಲ್ ತಯ್ಯಾರಿಸಿ ಸದರಿಯವುಗಳಿಗೆ ಇಲಾಖಾ ಮುದ್ರೆ ನಂಬರ 415 ಎಂದು ಸೀಲ್ ಮಾಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 11 ಪ್ರಾಸಾ-02 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತದನಂತರ ಸದರಿ ಜಪ್ತು ಮಾಲುಗಳನ್ನು ಮತ್ತು ವಾಹನವನ್ನು ತಮ್ಮ ಸುಪ್ರದ್ದಿಗೆ ಪಡೆದು ಬೆಳಗಿನ ಜಾವ 03-00 ರಿಂದ 04-00 ಗಂಟೆ ವರೆಗೆ ಪಂಚನಾಮೆಯನ್ನು ಬರೆದುಕೊಂಡು ತದನಂತರ ಜಪ್ತು ಮಾಲು ಮತ್ತು ವಾಹನವನ್ನು ಜಪ್ತಿಪಡಿಸಿಕೊಂಡು ಠಾಣೆಗೆ ಬಂದು ಸರಕಾರಿ ತರ್ಫೆ ಪಿರ್ಯಾದಿ ಮತ್ತು ಪ್ರ.ವ.ವರದಿಯನ್ನು ತಯ್ಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದು ಹಾಗೂ ಮುದ್ದೇಮಾಲು ಮತ್ತು ವಾಹನವನ್ನು ತಮ್ಮ ಬಳಿ ಇಟ್ಟುಕೊಳ್ಳಲು ಪರವಾನಿಗೆಯನ್ನು ಪಡೆದಿರುತ್ತೇನೆಂದು ಹಾಗೂ ಅದೇ ದಿನ ಚಾಸಾ-4 ರವರ ಹೇಳಿಕೆಯನ್ನು ಪಡೆದುಕೊಂಡು ತದನಂತರ ಸದರಿ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-6 ರವರಿಗೆ ವಹಿಸಿಕೊಟ್ಟಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 12 ಪ್ರಾಸಾ-03 ಸಂತೋಷ ಕುಮಾರ ತಂದೆ ವೈಜಿನಾಥರಾವ ಅಬಕಾರಿ ನಿರೀಕ್ಷಕರು ಉಪ-ವಿಭಾಗ-16, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 04.05.2019 ರಂದು ಚಾಸಾ-3 ರವರಿಂದ ಕಡತಗಳನ್ನು ತೆಗೆದುಕೊಂಡಿರುತ್ತೇನೆಂದು ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಲಬುರಗಿ ರವರಿಗೆ ವಾಹನ ನಂ.ಕೆಎ-28-ಎಂ-7878 Indica Vista ನೇದ್ದರ ಬಗ್ಗೆ "B" Extract ಕೋರಿದ್ದು, ದಿನಾಂಕಃ 06.05.2019 ರಂದು "B" Extract ವರದಿಯನ್ನು ನೀಡಿರುತ್ತಾರೆಂದು ಹಾಗೂ ಅದನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡು ದಿನಾಂಕಃ 13.05.2019 ರಂದು ರಾಯಚೂರ ರಾಸಾಯನಿಕ ವಿಶ್ಲೇಷಣಾ ಕೇಂದ್ರಕ್ಕೆ ಚಾಸಾ-4 ರವರನ್ನು ಮುದ್ದೇಮಾಲುಗಳ ಪರೀಕ್ಷೆಗೆ ಕಳುಹಿಸಿಕೊಟ್ಟಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 13 ಪ್ರಾಸಾ-03 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ14.05.2019 ರಂದು ರಾಸಾಯನಿಕ ವಿಶ್ಲೇಷಣಾ ಕೇಂದ್ರದಿಂದ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡು ಚಾಸಾ-4 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆಂದು ಹಾಗೂ ದಿನಾಂಕಃ 25.07.2019 ರಂದು ತನಿಖೆ ಪೂರ್ಣಗೊಂಡಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಅಂತಿಮ ವರದಿಯನ್ನು ಸಲ್ಲಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ-14 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ

ಪ್ರ-15 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುವಿರಾ?

ಉಃ

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿನಾಂಕಃ 20.01.2026

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಅಫಜಲಪೂರ.